ದಿಃ 19-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು.

**ಮುಖ್ಯ ವಿಚಾರಣೆಃ** ವಾದಿ ಪರವಾಗಿ ಶ್ರೀಮತಿ ಎಸ್ ಎಸ್ ಕೆ ವಕೀಲರಿಂದ.

ಈ ದಾವೆಯಲ್ಲಿ ನಾನು 1 ನೇ ವಾದಿಯಾಗಿದ್ದು, ಇಂದು ನಾನು ಮಾನ್ಯ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೆನೆ. ಅದರಲ್ಲಿ ಬರೆದಿರುವ ಎಲ್ಲ ಅಂಶಗಳು ಸತ್ಯವಾಗಿರುತ್ತವೆ ಮತ್ತು ಸದ್ರಿ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಇಂದು ನಾನು ಮಾನ್ಯ ನ್ಯಾಯಲಯಕ್ಕೆ ಕುಮಾರ ದ್ಯಾಮಣ್ಣಾ ವಡ್ಡರ ರವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 1 ಎಂದು, ದಿನಾಂಕ 16-06-2023 ರಂದು ನನ್ನ ವಕೀಲರ ಮೂಲಕ ಮಾನ್ಯ ಅಧೀಕ್ಷರು, ಹೆಸ್ಕಾಂ ಶಿರಶಿ ರವರಿಗೆ ಕಳುಹಿಸಿದ ನೊಟೀಸಿನ ಕಚೇರಿಯ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ2 ಎಂದು, ಮೂರು ಅಂಚೆ ರಸೀದಿಗಳ್ಳು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಪಿ 3 ಎಂದು, ಎರಡು ಅಂಚೆ ಸ್ವೀಕೃತಿ ಪತ್ರವನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ 4 ಮತ್ತು 5 ಎಂದು, ದಿನಾಂಕ 31-05-2023 ರಂದು ನಾನು ಕೆ ಇ ಬಿ ಶಿರಸಿ ರವರಿಗೆ ಕಳುಹಿಸಿದ ಪತ್ರದ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 6 ಎಂದು, ದಿನಾಂಕ 28-06-2023 ರಂದು ನಾನು ಹೆಸ್ಕಾಂ ದಾಂಡೇಲಿ ಹಾಗೂ ಕೆ ಇ ಬಿ ಹಳಿಯಾಳ ರವರಿಗೆ ಕಳುಹಿಸಿದ ಪತ್ರಗಳ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 7 ಮತ್ತು 8 ಎಂದು, ನಿಪಿ 7 ಮತ್ತು 8 ಕ್ಕೆ ಸಂಬಂಧಿಸಿದ ಎರಡು ಅಂಚೆ ರಸೀದಿಗಳನ್ನು ಒಟ್ಟಾರೆಯಾಗಿ ನಿಪಿ 9 ಎಂದು, ಒಂದು ಅಂಚೆ ಸ್ವೀಕೃತಿ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 10 ಎಂದು, ದಿನಾಂಕ 04-07-2023 ರಂದು ಹೆಸ್ಕಾಂ ಹಳಿಯಳ ರವರು ಹೆಸ್ಕಾಂ ದಾಂಡೇಲಿ ರವರಿಗೆ ಕಳುಹಿಸಿದ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 11 ಎಂದು, ದಿನಾಂಕ 16-10-2023 ರಂದು ನನ್ನ ವಕೀಲರಾದ ಶ್ರೀ ಎನ್ ಸಿ ಈಳಿಗೇರ ರವರಿಗೆ ಹೆಸ್ಕಾಂ ಶಿರಸಿ ರವರು ಕಳುಹಿಸಿದ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 12 ಎಂದು, ನನ್ನನ್ನು ನಾಮಿನಿ ಎಂದು ತೋರಿಸಿರುವ ನನ್ನ ಗಂಡನ ಎಲ್ ಐ ಸಿ ಕಂಪನಿಯ ಜೀವನ ಸರಳ್ ಪಾಲಿಸಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 13 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೆ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.